**ಓ.ಎಸ್. ನಂ. 135/2016** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 16.2.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರಿದ ಪಾಟೀ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ ಎ.ಎಸ್.ಎಲ್ ವಕೀಲರಿಂದಃ</u>

ನಿಪಿ1 ನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ1 ರ ಕಂಡಿಕೆ 5 ರಲ್ಲಿ ಅಬ್ದುಲ್ಲಾ ಬಿನ್ ದಸ್ತಗಿರಿ ಸಾಬ್ ರವರಿಗೆ ಸದರಿ ಆಸ್ತಿ ಮಂಜೂರಾಗಿರುವ ಬಗ್ಗೆ ನಮೂದು ಇದ್ದು ಅವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ಅದೇ ರೀತಿ ನಿಪಿ2 ರ ಕಂಡಿಕೆ 5 ರಲ್ಲಿ ದಸ್ತಗಿರಿ ಬಿನ್ ಕಮಾಲ್ ಸಾಬ್ ರವರಿಗೆ ಸದರಿ ಆಸ್ತಿ ಮಂಜೂರಾಗಿರುವ ಬಗ್ಗೆ ನಮೂದು ಇದ್ದು ಅವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ನಿಪಿ1 ಮತ್ತು 2 ರಲ್ಲಿ ಕಂಡು ಬರುವ ಅಬ್ದುಲ್ಲ ಮತ್ತು ದಸ್ತಗಿರಿ ಸಾಬ್ ಮಗ ಮತ್ತು ತಂದೆ ಎಂದರೆ ಸರಿ. ನಿಪಿ3 ರಲ್ಲಿ ಅರ್ಜಿದಾರರ ಹೆಸರು ದಸ್ತಗಿರಿ ಸಾಬ್ ಮತ್ತು ಅವರ ತಂದೆ ಹೆಸರು ಕಮಲ್ ಸಾಬ್ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ3 ರಲ್ಲಿ ದಸ್ತಗಿರಿ ಸಾಬ್ ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ4 ರಲ್ಲಿ ಅರ್ಜಿದಾರರ ಹೆಸರು ಅಬ್ದುಲ್ಲ ಮತ್ತು ಅವರ ತಂದೆ ದಸ್ತಗಿರ್ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ4 ರಲ್ಲಿ ಸದರಿ ಅಬ್ದುಲ್ ಸಾಬ್ ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ5 ರಲ್ಲಿ ದಸ್ತಗಿರಿ ಸಾಬ್ ಮತ್ತು ಅವರ ತಂದೆಯ ಹೆಸರು ಕಮಲ್ ಸಾಬ್, ಅವರ ವಯಸ್ಸು 61 ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ6 ರಲ್ಲಿ ಅರ್ಜಿದಾರರ ಹೆಸರು ಅಬ್ದುಲ್ಲ, ಅವರ ತಂದೆಯ ಹೆಸರು ದಸ್ತಗಿರಿ ಸಾಬ್, ಅವರ ವಯಸ್ಸು 40 ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ1 ರಿಂದ 6 ದಾವ ಆಸ್ತಿಗಳಿಗೆ ಸಂಬಂಧಪಟ್ಟ ದಾಖಲೆಗಳು ಎಂದರೆ ಸರಿ. ನಿಪಿ8 ರ ಎರಡನೇ ಪುಟದಲ್ಲಿ ಬರೆದುಕೊಟ್ಟವರ ನಾಲ್ಕು ಹೆಬ್ಬೆಟ್ಟಿನ ಗುರುತುಗಳು ಇದ್ದು, ಅವರ ಪೈಕಿ ಮೊದಲ ಇಬ್ಬರು ಅಂದರೆ ಬಿಲಾಲ್ ಮತ್ತು ಅಬ್ದುಲ್ಲ ಹೆಬ್ಬೆಟ್ಟು ಗುರುತು ಹಾಕಿದ್ದು ಇನ್ನಿಬ್ಬರು ಹೆಬ್ಬೆಟ್ಟು ಗುರುತು ಜೊತೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ8 ರಲ್ಲಿರುವ ಸದರಿ ಅಮೀನಾ ಮತ್ತು ಬಾನು ಎನ್ನುವ ಸಹಿಗಳನ್ನು ನಿಪಿ8 ಎ ಮತ್ತು ನಿಪಿ8 ಬಿ ಎಂದು ಗುರುತಿಸಲಾಯಿತು. ನಿಪಿ9 ರಲ್ಲಿ ದಸ್ತಗಿರಿ ಸಾಬ್ ರವರ ವಾರಸುದಾರರು ಎಂದು ನಮೂದಿಸಿರುವ ವ್ಯಕ್ತಿಗಳು 17 ನೇ ಪ್ರತಿವಾದಿಗೆ ನಿಪಿ9 ರಲ್ಲಿ ಹೇಳಿರುವ ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಸದರಿ ಕ್ರಯಪತ್ರವು ನನಗೆ ಬಂಧನಕಾರಿಯಾಗುವುದಿಲ್ಲ ಎನ್ನುವರು. ನಿಪಿ9 ಕ್ರಯಪತ್ರವು ದಾವ 1 ನೇ ಐಟಂ ಆಸ್ತಿಗೆ ಸಂಬಂಧಿಸಿದ ಕ್ರಯಪತ್ರ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಸದರಿ ಕ್ರಯಪತ್ರವು ನನಗೆ ಬಂಧನಕಾರಿಯಾಗುವುದಿಲ್ಲ ಎನ್ನುವರು. ನಿಪಿ10 ರ ಪ್ರಕಾರ ದಸ್ತಗಿರಿ ಸಾಬ್ ರವರ ಮಗ ಅಬ್ದುಲ್ ಮತ್ತು ಅಬ್ದುಲ್ಲ ರವರ ಮಗ ಸಾದಿಕ್ ರವರು ಸೇರಿ ದಾವ 2 ನೇ ಐಟಂ ಆಸ್ತಿಯನ್ನು 17 ನೇ ಪ್ರತಿವಾದಿಗೆ ನಿಪಿ10 ರಲ್ಲಿ ಹೇಳಿರುವ ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು

ಮುಂದುವರಿದು ಸದರಿ ಕ್ರಯಪತ್ರವು ನನಗೆ ಬಂಧನಕಾರಿಯಾಗುವುದಿಲ್ಲ ಎನ್ನುವರು. ನನ್ನ ದಾವೆಯಲ್ಲಿ ಸದರಿ ಅಬ್ದುಲ್ಲ ಮತ್ತು ಸಾದಿಕ್ ರವರನ್ನು 2 ಮತ್ತು 18 ನೇ ಪ್ರತಿವಾದಿಯಾಗಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನಿಪಿ10 ರಲ್ಲಿ ನಮೂದಾಗಿರುವುದರಿಂದ ಅವರನ್ನು ಪಕ್ಷಗಾರರಾಗಿ ಮಾಡಿರುತ್ತೇನೆ ಎನ್ನುವರು.

ನಿಪಿ10 ರಲ್ಲಿರುವ ಅಬ್ದುಲ್ಲ ರವರು ದಸ್ತಗಿರಿ ಸಾಬ್ ರವರ ಮಗ ಎಂದರೆ ಸರಿ. 18 ನೇ ಪ್ರತಿವಾದಿಯು ಸದರಿ ಅಬ್ದುಲ್ಲರವರ ಮಗನಾಗಿರುವುದಿಲ್ಲ. ಮೂಲ 1 ನೇ ಪ್ರತಿವಾದಿಯ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಮೂಲ 1 ನೇ ಪ್ರತಿವಾದಿಯಾದ ಬಿಲಾಲ್ ರವರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯು ಲೇಟ್ ದಸ್ತಗಿರಿ ಸಾಬ್ ರವರ ಮಗಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನಗೆ ಯಾರೆಂದು ಗೊತ್ತಿರುವುದಿಲ್ಲ, ಆಕೆ ದಸ್ತಗಿರಿ ಸಾಬ್ ರವರು ಮಗಳು ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಸಹೋದರಿ ಸಹೋದರ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಯರ ವಂಶವೃಕ್ಷದ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಸದರಿ ಲೇಟ್ ದಸ್ತಗಿರಿ ಸಾಬ್ ರವರಿಗೆ ಬಿಲಾಲ್, ಅಬ್ದುಲ್ಲ, ಚೋಟೆಸಾಬ್, ಅನ್ವರ್, ಅಮೀರ್, ಪ್ಯಾರಿಜಾನ್, ಅಮೀನಾ, ಜುಬೇದಾ ಮತ್ತು ಇಲಿಯಾನ್ ಎಂಬ ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿದಾರರು ನಿಪಿ9 ಮತ್ತು 10 ನ್ನು ನೋಡಿದಾಗ ಅವರು ಮಕ್ಕಳು ಎಂದು ಅನಿಸುತ್ತದೆ ಎನ್ನುವರು. ನಾನು ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ದಸ್ತಗಿರಿ ಸಾಬ್ ರವರಿಗೆ ಎಷ್ಟು ಜನ ಮಕ್ಕಳು ಎಂದು ತಿಳಿದುಕೊಂಡಿರುವುದಿಲ್ಲ.

ನಿಪಿ8 ರಂತೆ ನನ್ನ ತಂದೆಯ ಹೆಸರಿಗೆ ಕ್ರಯಪತ್ರವಾದ ನಂತರ ಖಾತೆ ಬದಲಾವಣೆ ಮಾಡಲು ಅವರು ಅರ್ಜಿ ನೀಡಿದ್ದರು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಆ ಬಗ್ಗೆ ನಿಪಿ13 ಮತ್ತು ಇ.ಸಿ ಯಲ್ಲಿ ನಮೂದಾಗಿರುತ್ತದೆ ಎನ್ನುವರು. ನಿಪಿ13 ರ ಎಂ.ಆರ್ ಪ್ರಕಾರ ನನ್ನ ತಂದೆಯ ಹೆಸರಿಗೆ ಪಹಣಿಯಾಗಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ನಿಪಿ13 ರಲ್ಲಿ ಭೂಸುಧಾರಣ ಕಾಯ್ದೆಯ ಕಲಂ 79 ಎ ಮತ್ತು 79 ಬಿ ಉಲ್ಲಂಘನೆಯಾಗಿರುವ ಬಗ್ಗೆ ವಿಚಾರಣೆಗೊಳಪಡಿಸಿ ಎಂದು ನಮೂದಾಗಿರುತ್ತದೆ ಎನ್ನುವರು. ನಿಪಿ13 ರಲ್ಲಿ ಆ ರೀತಿ ನಮೂದಾಗಿರುವ ಆದೇಶದ ವಿರುದ್ಧ ನನ್ನ ತಂದೆ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ದಾವೆ ಸಲ್ಲಿಸುವ ಸಮಯದಲ್ಲಿ ದಾವಆಸ್ತಿಯ ಪಹಣಿಯು ನನ್ನ ತಂದೆಯ ಹೆಸರಿನಲ್ಲಿರುವುದಿಲ್ಲ ಎಂದು ಗೊತ್ತಿತ್ತು. ಯಾವ ಕಾರಣಕ್ಕೆ ಪಹಣಿಯಾಗಿರುವುದಿಲ್ಲ ಎಂದು ಗೊತ್ತಿತ್ತಾ ಎಂದರೆ ಸಾಕ್ಷಿದಾರರು 79 ಎ ಮತ್ತು 79 ಬಿ ಉಲ್ಲಂಘನೆಯಾಗಿರುವ ಬಗ್ಗೆ ನಮೂದಾಗಿದ್ದರಿಂದ ಪಹಣಿಯಾಗಿರುವುದಿಲ್ಲ ಎಂದು ಗೊತ್ತಿತ್ತು. 2001 ರಿಂದ ಈ ದಾವೆ ದಾಖಲಿಸುವವರೆಗೆ

ನನ್ನ ತಂದೆ ನಿಪಿ13 ನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನನ್ನ ತಂದೆ ಆ ರೀತಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವೆ ದಾಖಲಿಸಿದ ನಂತರವೂ ಸಹ ನನ್ನ ತಂದೆ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಈ ದಾವೆ ದಾಖಲಿಸಿದ ನಂತರ ದಾವಆಸ್ತಿಗಳ ಪಹಣಿಗಳನ್ನು ನನ್ನ ಹೆಸರಿಗೆ ಮಾಡಿ ಎಂದು ಭೂಕಂದಾಯ ಕಾಯ್ದೆ ಪ್ರಕಾರ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿದಾರರು ಈ ದಾವೆ ಚಾಲ್ತಿಯಲ್ಲಿದ್ದರಿಂದ ಅರ್ಜಿ ಸಲ್ಲಿಸಿರುವುದಿಲ್ಲ ಎನ್ನುವರು. 2012 ರಲ್ಲಿ ನನ್ನ ತಂದೆ ತೀರಿಕೊಳ್ಳುವವರೆಗೂ ನಾನು ಹಾಗೂ ನನ್ನ ತಂದೆ ಒಟ್ಟಿಗೆ ವಾಸವಾಗಿದ್ದೆವು. ನನ್ನ ತಂದೆಯು ಪಹಣಿಯಾಗದಿರುವ ಬಗ್ಗೆ ಹಾಗೂ 17 ನೇ ಪ್ರತಿವಾದಿಯ ಹೆಸರಿಗೆ ಪಹಣಿಯಾಗಿರುವ ಬಗ್ಗೆ ನಿಮಗೆ ಹೇಳಿದ್ದರಾ ಎಂದರೆ ಸಾಕ್ಷಿದಾರರು ಖಾತೆಯಾಗಿರುವ ವಿಚಾರ ನನ್ನ ತಂದೆಗೇ ಗೊತ್ತಿರಲಿಲ್ಲ ಎನ್ನುವರು. ನನ್ನ ತಂದೆ ತೀರಿಕೊಳ್ಳುವವರಗೂ 17 ನೇ ಪ್ರತಿವಾದಿಯ ಹೆಸರಿಗೆ ಪಹಣಿಯಾಗಿರುವ ವಿಚಾರ ನನಗೆ ಗೊತ್ತಿರಲಿಲ್ಲ. 17 ನೇ ಪ್ರತಿವಾದಿಯ ಹೆಸರಿಗೆ ಪಹಣಿಯಾಗಿರುವ ವಿಚಾರ 2016 ರಲ್ಲಿ ಗೊತ್ತಾಗಿರುತ್ತದೆ, ಅದಕ್ಕಿಂತ ಪೂರ್ವದಲ್ಲಿ ನಮ್ಮ ಹೆಸರಿಗೆ ಆಗಿರಬಹುದು ಎಂದು ತಿಳಿದುಕೊಂಡಿದ್ದೆನು.

2001 ರಿಂದ 2012 ರ ನಡುವೆ ನಾನು ಒಮ್ಮೆಯೂ ದಾವಆಸ್ತಿಗೆ ಹೋಗಿರುವುದಿಲ್ಲ, 2016 ರಲ್ಲಿ ಹೋಗಿರುತ್ತೇನೆ. ಯಾವ ಕಾರಣಕ್ಕೆ 2016 ರಲ್ಲಿ ಹೋಗಿರುತ್ತೀರಾ ಎಂದರೆ ಸಾಕ್ಷಿದಾರರು ನಮ್ಮ ಜಮೀನು ಏನಾಗಿರುತ್ತದೆ ಎಂದು ನೋಡಲು ಹೋಗಿರುತ್ತೇನೆ ಎನ್ನುವರು. ಯಾವ ದಿನಾಂಕದಂದು ಹೋಗಿರುತ್ತೀರಿ ಎಂದರೆ ಸಾಕ್ಷಿದಾರರು 2015 ಡಿಸೆಂಬರ್ ಅಥವಾ 2016 ಜನವರಿ ತಿಂಗಳಿನಲ್ಲಿ ಹೋಗಿರುತ್ತೇನೆ ಎನ್ನುವರು. ನಾನು 2016 ರಲ್ಲಿ ಹೋದಾಗ ದಾವ 2 ಐಟಂ ಆಸ್ತಿಗಳನ್ನು ನೋಡಿರುತ್ತೇನೆ. ಆಗ ಸದರಿ 2 ಆಸ್ತಿಗಳು ಖಾಲಿ ಇದ್ದು ಯಾವುದೇ ಬೆಳೆ ಬೆಳೆದಿರಲಿಲ್ಲ. ಸದರಿ ಸಮಯದಲ್ಲಿ ನಾನು 2 ನೇ ಪ್ರತಿವಾದಿಯನ್ನು ಭೇಟಿಯಾಗಿರುತ್ತೇನೆ. ಭೇಟಿಯಾದಾಗ ಏನು ಮಾತುಕತೆಯಾಗಿರುತ್ತದೆ ಎಂದರೆ ಸಾಕ್ಷಿದಾರರು ನಮ್ಮ ಜಮೀನನ್ನು ನಮಗೆ ಬಿಟ್ಟುಕೊಡಲು ಕೇಳಿದ್ದು, ಆಗ ಅವರು ಜಮೀನ್ನು ಮಾರಾಟ ಮಾಡಲಾಗಿರುತ್ತದೆ ಎಂದು ಹೇಳಿರುತ್ತಾರೆ ಎನ್ನುವರು. 2 ನೇ ಪ್ರತಿವಾದಿಯು ದಾವಆಸ್ತಿಗಳಲ್ಲಿ ಸಿಕ್ಕಿರುವುದಿಲ್ಲ, ಅವರು ಚಾಮಲಾಪುರ ಗ್ರಾಮದ ರಸ್ತೆಯಲ್ಲಿ ಸಿಕ್ಕಿರುತ್ತಾರೆ ಎನ್ನುವರು. 2 ನೇ ಪ್ರತಿವಾದಿಯು 2016 ರಲ್ಲಿ ಎಲ್ಲಿ ವಾಸವಾಗಿದ್ದರು ಎಂದು ತಿಳಿದುಕೊಂಡಿರುವುದಿಲ್ಲ. ನಂತರ ನಾನು ಅವರನ್ನು ಮತ್ತೆ ಭೇಟಿಯಾಗಿರುವುದಿಲ್ಲ. ನಂತರ ನೀವು ನೇರವಾಗಿ ದಾವೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿದಾರರು ನೋಂದಣಿ ಕಛೇರಿಗೆ ಹೋಗಿ ದಾಖಲಾತಿಯನ್ನು ಪರಿಶೀಲಿಸಿ ನಂತರ ದಾವೆ ಹೂಡಿರುತ್ತೇನೆ ಎನ್ನುವರು. ನನ್ನ ತಂದೆ 2010 ರಲ್ಲಿ ದಾವಆಸ್ತಿಗಳನ್ನು 2 ನೇ ಪ್ರತಿವಾದಿಗೆ ಬೋಗ್ಯಕ್ಕೆ ಮೌಖಿಕವಾಗಿ ನೀಡಿರುವುದಾಗಿ ಹೇಳಿರುತ್ತಾರೆ. 2 ನೇ ಪ್ರತಿವಾದಿಯಿಂದ ಬೋಗ್ಯದ ಪ್ರತಿಫಲ ಏನು ನೀಡಲು ಮಾತುಕತೆಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಯನ್ನು ಭೇಟಿಯಾದಾಗ

ದಾವಆಸ್ತಿಗಳನ್ನು ಬಿಟ್ಟುಕೊಡುವಂತೆ ಮಾತ್ರ ಕೇಳಿರುತ್ತೇನೆ. ಬೇರೆ ಯಾವುದೇ ವಿಚಾರ ಕೇಳಿರುವುದಿಲ್ಲ. ಸಾಕ್ಷಿದಾರರು ನಂತರ ಮುಂದುವರಿದು ಆಸ್ತಿಗಳನ್ನು ಮಾರಾಟ ಮಾಡಿರುತ್ತೇನೆ ಎಂದು ಹೇಳಿದ್ದು ಬೇರೆ ಯಾವ ವಿಚಾರವನ್ನು ಕೇಳಿರುವುದಿಲ್ಲ. ನಾನು ಅವರ ಜೊತೆ ಜಗಳ ಮಾಡಿರುವುದಿಲ್ಲ ಮತ್ತು ಪೋಲಿಸರಿಗೆ ದೂರನ್ನು ನೀಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.